Through e-mail

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಛೇರಿ, ಮಂಡ್ಯ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅಧಿಸೂಚನೆ ಸಂಖ್ಯೆ: 02/2026-27 ದಿನಾಂಕ: 03.11.2026

ವಿಷಯ: ಶ್ರೀರಂಗಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಕ್ಯಾಂಟೀನ್ ನಡೆಸಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1) ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಸಾಮಾನ್ಯ ಸುತ್ತೋಲೆ ಸಂಖ್ಯೆ: 1/2005, ದಿನಾಂಕ: 13.06.2005 (No.LCA.I. 200/2000).

2) ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀರಂಪಟ್ಟಣ ರವರ ಪತ್ರ ಸಂಖ್ಯೆ: 904/2026 ದಿನಾಂಕ: 10.07.2026 ರ ಜೊತೆಗೆ ಅಧ್ಯಕ್ಷರು, ವಕೀಲರ ಸಂಘ (ರಿ.), ಶ್ರೀರಂಗಪಟ್ಟಣ ರವರ ಮನವಿ ಪತ್ರ.

3) ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀರಂಪಟ್ಟಣ ರವರ ಪತ್ರ ಸಂಖ್ಯೆ: 1135/2026 ದಿನಾಂಕ: 28.08.2026.

4) ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ ವಿಭಾಗ ರವರ ಕಛೇರಿ ಪತ್ರ-ಕಾಪಾಅ: ಮಂವಿ: ಬಾಡಿಗೆ ನಿಗಧಿಪಡಿಸಿದ: 2026-27, ಸ.ಇಂ-2 ಶ್ರೀರಂಗಪಟ್ಟಣ/ 4193-99 ದಿನಾಂಕ: 23.09.2026.

5) ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: 01/2026-27 ದಿನಾಂಕ: 03.10.2026.

6) ಕಛೇರಿ ಟಿಪ್ಪಣಿ ಮತ್ತು ಅದರ ಮೇಲೆ ನೀಡಲಾದ ಆದೇಶಗಳು.

****

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ನ್ಯಾಯಾಲಯದ ಆವರಣದಲ್ಲಿ ಕ್ಯಾಂಟೀನ್ ನಡೆಸಲು, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಯಮ ಮತ್ತು ಷರತ್ತುಗಳು:

1) ಅಗತ್ಯವಿದ್ದಲ್ಲಿ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಪರವಾನಗಿ/ ಅನುಮತಿ/ಮಂಜೂರಾತಿ ಪತ್ರಗಳನ್ನು ಪರಿಶೀಲನೆಗಾಗಿ ಅರ್ಜಿದಾರರು ಹಾಜರುಪಡಿಸಬೇಕು.

2) ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಎರಡು ಭಾವಚಿತ್ರಗಳನ್ನು ಸಲ್ಲಿಸಬೇಕು.

3) ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ರವರು ವಿಧಿಸುವ ನಿಯಮ ಮತ್ತು ಷರತ್ತುಗಳಿಗೆ ಬದ್ಧರಾಗಿರುವುದಾಗಿ ಅರ್ಜಿದಾರರು ಒಪ್ಪಂದವನ್ನು ಮಾಡಿಕೊಳ್ಳಬೇಕು. ಅಲ್ಲದೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ ಹಾಗೂ/ಅಥವಾ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು ಕಾಲಕಾಲಕ್ಕೆ ವಿಧಿಸುವ ಇತರೆ ಷರತ್ತುಗಳನ್ನು ಸಹ ಪಾಲಿಸಬೇಕು.

4) ಕ್ಯಾಂಟೀನ್ ಮತ್ತು ಅದರ ಆವರಣವನ್ನು ಸದಾ ಸ್ವಚ್ಛ ಮತ್ತು ಆರೋಗ್ಯಕರ ಸ್ಥಿತಿಯಲ್ಲಿ ನಿರ್ವಹಿಸಬೇಕು.

5) ಅಗತ್ಯವಿದ್ದಾಗ ಪರವಾನಗಿ/ಮಂಜೂರಾತಿ/ಅನುಮತಿ ಪತ್ರ ಹಾಗೂ ಗುರುತಿನ ಚೀಟಿಯನ್ನು ಹಾಜರುಪಡಿಸಬೇಕು. ಮಂಜೂರು ಮಾಡಲಾದ ಸ್ಥಳದಲ್ಲಿ ಅನುಮತಿದಾರರು ಸ್ವತಃ ಮಾತ್ರ ವ್ಯವಹಾರ ನಡೆಸಬೇಕು.

6) ಯಾವುದೇ ಇತರೆ ವ್ಯಕ್ತಿಯನ್ನು ಕ್ಯಾಂಟೀನ್ ವ್ಯವಹಾರ ನಡೆಸಲು ನೇಮಿಸಬಾರದು ಅಥವಾ ಅವಕಾಶ ನೀಡಬಾರದು. ಹಾಗೆ ಮಾಡಿದಲ್ಲಿ, ನೀಡಲಾದ ಪರವಾನಗಿಯನ್ನು ತಕ್ಷಣವೇ ರದ್ದುಪಡಿಸಲಾಗುವುದು.

7) ಪರವಾನಗಿ ನೀಡಲಾದ ಉದ್ದೇಶವನ್ನು ಹೊರತುಪಡಿಸಿ ಯಾವುದೇ ಇತರೆ ವ್ಯವಹಾರವನ್ನು ನಡೆಸಬಾರದು. ಹಾಗೆ ಮಾಡಿದಲ್ಲಿ, ಪರವಾನಗಿಯನ್ನು ರದ್ದುಪಡಿಸಲಾಗುವುದು.

8) ವಿದ್ಯುತ್, ನೀರು ಮತ್ತು ಒಳಚರಂಡಿ ಶುಲ್ಕ ಹಾಗೂ ಸಂಪರ್ಕ ಮತ್ತು ಮರುಸಂಪರ್ಕ ಶುಲ್ಕಗಳು ಸೇರಿದಂತೆ ಅನ್ವಯಿಸುವ ಇತರೆ ಎಲ್ಲಾ ಶುಲ್ಕಗಳನ್ನು ಅನುಮತಿದಾರರು (Allottee) ಪಾವತಿಸಬೇಕು.

9) ಕ್ಯಾಂಟೀನ್ ವ್ಯವಹಾರವನ್ನು ಬೆಳಿಗ್ಗೆ 7.00 ಗಂಟೆಯಿಂದ ಸಂಜೆ 6.30 ಗಂಟೆಯವರೆಗೆ ಮಾತ್ರ ನಡೆಸಲು ಅನುಮತಿಸಲಾಗುವುದು.

10) ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಅಸ್ತಿತ್ವದಲ್ಲಿರುವ ಕಟ್ಟಡ/ರಚನೆಗೆ ಯಾವುದೇ ಬದಲಾವಣೆ, ನಿರ್ಮಾಣ ಅಥವಾ ಇತರೆ ಕಾಮಗಾರಿಗಳನ್ನು ಕೈಗೊಂಡಲ್ಲಿ, ಪರವಾನಗಿಯನ್ನು ತಕ್ಷಣವೇ ರದ್ದುಪಡಿಸಲಾಗುವುದು. ಇದರಿಂದಾಗಿ ಉಂಟಾಗುವ ಯಾವುದೇ ಹಾನಿಗೆ ಅನುಮತಿದಾರರು (Allottee) ಹೊಣೆಗಾರರಾಗಿರುತ್ತಾರೆ.

11) ಪರವಾನಗಿ ನೀಡಲಾದ ಸ್ಥಳವು ಅನುಮತಿದಾರರಿಗೆ ಅಗತ್ಯವಿಲ್ಲದ ಸಂದರ್ಭದಲ್ಲಿ ಅಥವಾ ಪರವಾನಗಿ ನೀಡಿದ ಪ್ರಾಧಿಕಾರಕ್ಕೆ ಸದರಿ ಸ್ಥಳದ ಅಗತ್ಯವಿದ್ದಲ್ಲಿ, ಪರವಾನಗಿ ಅವಧಿ ಮುಗಿಯುವ ಮುನ್ನವೇ, ಪರವಾನಗಿ ನೀಡಿದ ಪ್ರಾಧಿಕಾರದಿಂದ ನೋಟಿಸ್ ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಸದರಿ ಸ್ಥಳವನ್ನು ಖಾಲಿ ಮಾಡಬೇಕು. ಈ ಸಂಬಂಧ ಯಾವುದೇ ಪರಿಹಾರವನ್ನು ಪಡೆಯಲು ಅನುಮತಿದಾರರು ಅರ್ಹರಾಗಿರುವುದಿಲ್ಲ.

12) ದಾವೆದಾರರು/ಕಕ್ಷಿದಾರರ ಮುಕ್ತ ಸಂಚಾರಕ್ಕೆ ಹಾಗೂ ವಾಹನಗಳ ನಿಲುಗಡೆಗೆ ಯಾವುದೇ ರೀತಿಯ ಅಡಚಣೆ ಉಂಟಾಗದಂತೆ ಕ್ಯಾಂಟೀನ್ ವ್ಯವಹಾರವನ್ನು ನಡೆಸಬೇಕು.

13) ನಗರಸಭೆ/ಪುರಸಭೆ/ಇತರೆ ಸ್ಥಳೀಯ ಸಂಸ್ಥೆಗಳ ಕಾಯ್ದೆಗಳಡಿ ಅಗತ್ಯವಿರುವ ಯಾವುದೇ ಪರವಾನಗಿಯನ್ನು ಕಾಲಕಾಲಕ್ಕೆ ಪಡೆದು, ಕ್ಯಾಂಟೀನ್ ಸ್ಥಳದಲ್ಲಿ ಸ್ಪಷ್ಟವಾಗಿ ಕಾಣುವಂತೆ ಪ್ರದರ್ಶಿಸಬೇಕು.

14) ವ್ಯಕ್ತಿಗಳಿಗೆ ಅಥವಾ ಆಸ್ತಿಗೆ ಹಾನಿ ಉಂಟುಮಾಡಬಹುದಾದ, ಬೆಂಕಿ ಅವಘಡಕ್ಕೆ ಕಾರಣವಾಗಬಹುದಾದ ಅಥವಾ ಯಾವುದೇ ರೀತಿಯ ತೊಂದರೆ/ಉಪದ್ರವ ಉಂಟುಮಾಡಬಹುದಾದ ವಸ್ತುಗಳನ್ನು ಕ್ಯಾಂಟೀನ್ ಆವರಣದಲ್ಲಿ ಇಡಬಾರದು ಅಥವಾ ಸಂಗ್ರಹಿಸಬಾರದು.

15) ರೂ.20,000/- (ರೂಪಾಯಿ ಇಪ್ಪತ್ತು ಸಾವಿರ ಮಾತ್ರ) ಭದ್ರತಾ ಠೇವಣಿ ಮೊತ್ತವನ್ನು ಪಾವತಿಸಬೇಕು. ಇದಲ್ಲದೆ, ಪ್ರತಿ ತಿಂಗಳು ರೂ.5,600/- (ರೂಪಾಯಿ ಐದು ಸಾವಿರದ ಆರು ನೂರು ಮಾತ್ರ) ಬಾಡಿಗೆಯನ್ನು ಪಾವತಿಸಬೇಕು.

16) ಅನುಮತಿದಾರರು ಮೂರು ವರ್ಷಗಳನ್ನು ಮೀರದ ಅವಧಿಗೆ ಪರವಾನಗಿಯನ್ನು ನೀಡಲಾಗುವುದು.

17) ಪರವಾನಗಿ ಅವಧಿ ಮುಗಿದ ನಂತರ, ಕ್ಯಾಂಟೀನ್ ಸ್ಥಳವನ್ನು ಉತ್ತಮ ಸ್ಥಿತಿಯಲ್ಲಿ ಖಾಲಿ ಮಾಡಿರುವುದಕ್ಕೆ ಒಳಪಟ್ಟು, ನೀರಿನ ಶುಲ್ಕ, ವಿದ್ಯುತ್ ಶುಲ್ಕ ಅಥವಾ ಇತರೆ ಯಾವುದೇ ಬಾಕಿ ಮೊತ್ತಗಳಿದ್ದಲ್ಲಿ ಅವುಗಳನ್ನು ಭದ್ರತಾ ಠೇವಣಿ ಮೊತ್ತದಿಂದ ಕಡಿತಗೊಳಿಸಿ, ಉಳಿದ ಮೊತ್ತವನ್ನು ಯಾವುದೇ ಬಡ್ಡಿಯಿಲ್ಲದೆ ಅನುಮತಿದಾರರಿಗೆ ಮರುಪಾವತಿಸಲಾಗುವುದು.

18) ಮಂಜೂರಾತಿ ಪ್ರಾಧಿಕಾರವು ಯಾವುದೇ ಕಾರಣವನ್ನು ನೀಡದೆ ಹಾಗೂ ಯಾವುದೇ ಪೂರ್ವ ನೋಟಿಸ್ ನೀಡದೆ, ನೀಡಲಾದ ಪರವಾನಗಿಯನ್ನು ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ. ಅಂತಹ ಸಂದರ್ಭದಲ್ಲಿ ಅನುಮತಿದಾರರು ಕ್ಯಾಂಟೀನ್ ಸ್ಥಳವನ್ನು ಖಾಲಿ ಮಾಡಬೇಕು.

19) ಮೇಲ್ಕಂಡ ಯಾವುದೇ ನಿಯಮ ಅಥವಾ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ, ನೀಡಲಾದ ಪರವಾನಗಿಯನ್ನು ರದ್ದುಪಡಿಸಲಾಗುವುದು.

20) ಅರ್ಜಿಯನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಸಲ್ಲಿಸಬೇಕು.

21) ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 18.11.2026 ರಂದು ಸಂಜೆ 5.00 ಗಂಟೆಯೊಳಗೆ ಆಗಿರುತ್ತದೆ.

3/11/26

(ಚಂದ್ರ ಶೇಖರ್ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ
Pri. District and Sessions Judge
Mandya.

TCTO. 4571/26

ಪ್ರತಿಗಳನ್ನು :

1) ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮಂಡ್ಯ (ಶ್ರೀರಂಗಪಟ್ಟಣದಲ್ಲಿ ಪೀಠಾಸೀನ) ಇವರಿಗೆ.

2) ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ, ಇವರಿಗೆ ಅಧಿಸೂಚನೆಯ ಪ್ರತಿಯನ್ನು ನ್ಯಾಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ಹಾಗೂ ಅಧ್ಯಕ್ಷರು/ಕಾರ್ಯದರ್ಶಿಗಳು, ವಕೀಲರ ಸಂಘ, ಶ್ರೀರಂಗಪಟ್ಟಣ ಇವರ ಮಾಹಿತಿಗಾಗಿ ಪ್ರತಿಯನ್ನು ನೀಡುವಂತೆ ಕೋರಲಾಗಿದೆ.

3) ಮಂಡ್ಯದ ನ್ಯಾಯಾಲಯಗಳ ಸಂಕೀರ್ಣವು ಸೇರಿದಂತೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಿಗೆ ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

4) ಸಾಫ್ಟ್‌ವೇರ್ ತಂತ್ರಜ್ಞರು, ಜಿಲ್ಲಾ ನ್ಯಾಯಾಲಯ, ಮಂಡ್ಯ, ಇವರಿಗೆ ಅಧಿಸೂಚನೆಯನ್ನು ಮಂಡ್ಯ ಜಿಲ್ಲಾ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವಂತೆ ನಿರ್ದೇಶಿಸಲಾಗಿದೆ.

5) ಕಛೇರಿ ಪ್ರತಿ.

ಅರ್ಜಿ ನಮೂನೆ

(ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ನ್ಯಾಯಾಲಯದ ಆವರಣದಲ್ಲಿ ಕ್ಯಾಂಟೀನ್ ನಡೆಸಲು ಅರ್ಜಿ)

ಸ್ವಯಂ-ದೃಢೀಕರಿಸಿದ ಭಾವಚಿತ್ರವನ್ನು ಅಂಟಿಸಲು

ರವರಿಗೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.

ಕ್ರ.ಸಂ.	ವಿವರಗಳು	
1.	ಅರ್ಜಿದಾರರ ಹೆಸರು	
2.	ತಂದೆ/ಪತಿಯ ಹೆಸರು	
3.	ಜನ್ಮ ದಿನಾಂಕ	
4.	ಖಾಯಂ ವಿಳಾಸ	
5.	ವಿದ್ಯಾರ್ಹತೆ	
6.	ಪ್ರಸ್ತುತ ವೃತ್ತಿ	
7.	ವಿಳಾಸ ಮತ್ತು ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಚಾಲನಾ ಪರವಾನಗಿ ಇತ್ಯಾದಿ - ಸ್ವಯಂ ದೃಢೀಕರಿಸಿದ ಪ್ರತಿ)	
8.	ದೂರವಾಣಿ/ಮೊಬೈಲ್ ಸಂಖ್ಯೆ	
9.	ಅನುಭವದ ವಿವರಗಳು (ಇದ್ದಲ್ಲಿ)	

ಘೋಷಣಾ ಪತ್ರ

ನಾನು, ... ಆದ ನಾನು ಮೇಲೆ ನೀಡಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ ಎಂದು ಈ ಮೂಲಕ ಘೋಷಿಸುತ್ತೇನೆ.

ಅಲ್ಲದೆ, ಅಧಿಸೂಚನೆಯಲ್ಲಿ ತಿಳಿಸಲಾಗಿರುವ ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಿಕೊಂಡಿದ್ದು, ಸದರಿ ನಿಯಮಗಳು ಷರತ್ತುಗಳಿಗೆ ಬದ್ಧನಾಗಿರಲು ಈ ಮೂಲಕ ಒಪ್ಪಿ ಈ ಕೆಳಗೆ ಸಹಿ ಮಾಡಿರುತ್ತೇನೆ.

ಸ್ಥಳ:
ದಿನಾಂಕ:

ಅರ್ಜಿದಾರರ ಸಹಿ